# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ

**KARNATAKA STATE FINANCIAL CORPORATION**

Established under the State Financial Corporations' Act, 1951


ಸಂಖ್ಯೆ: ಕ.ರಾ.ಹ.ಸಂ./ಪ್ರ.ಕ./ ಸಿಬ್ಬಂದಿ | 333 | 2019-20
Ref. No. KSFC/H.O./

ದಿನಾಂಕ:
Date 12/6/19

ಸಿಬ್ಬಂದಿ ಪ್ರಕಟಣೆ ಸಂಖ್ಯೆ - 08

ಸಂಸ್ಥೆಯ ನಿರ್ದೇಶಕ ಮಂಡಳಿಯು ಸಂಸ್ಥೆಯ ಉದ್ಯೋಗಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಮಕ್ಕಳ ವಿದ್ಯಾಭ್ಯಾಸದ ಮುಂಗಡದ ಮೊತ್ತವನ್ನು ಪರಿಷ್ಕರಿಸಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಡುತ್ತಿರುವ ವೆಚ್ಚವನ್ನು ಭರಿಸಲು ಅನುಕೂಲವಾಗಲೆಂದು ಮಂಜೂರು ಮಾಡುತ್ತಿರುವ ಬಡ್ಡಿ ರಹಿತ ಮುಂಗಡ ಹಣವನ್ನು ದಿನಾಂಕ 20.05.2019 ರಂದು ನಡೆದ ಸಭೆಯಲ್ಲಿ ರೂ.30,000/- ಗಳಿಂದ ರೂ.50,000/- ಗಳಿಗೆ ಹೆಚ್ಚಿಸಲು ಅನುಮೋದಿಸಿರುತ್ತದೆ ಎಂಬ ಅಂಶವನ್ನು ತಿಳಿಸಲು ಹರ್ಷಿಸುತ್ತೇವೆ. ಈ ಪರಿಷ್ಕೃತ ಮುಂಗಡ ಸೌಲಭ್ಯವು 2019-20ರ ಹಣಕಾಸಿನ ವರ್ಷ ಅಂದರೆ ದಿನಾಂಕ 01.04.2019ರಿಂದ ಅನ್ವಯವಾಗುತ್ತದೆ. ಈ ಮುಂಗಡ ಹಣವನ್ನು ವರ್ಷದಲ್ಲಿ ಒಂದು ಬಾರಿ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಮಾತ್ರ ನಿಗದಿತ ಅರ್ಜಿಯನ್ನು ಸಲ್ಲಿಸಿ ಪಡೆಯಬಹುದು. ಜುಲೈ ತಿಂಗಳ ನಂತರ ಸ್ವೀಕರಿಸಿದ ಅರ್ಜಿಗಳನ್ನು ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ.

ಈಗಾಗಲೇ ರೂ.30,000/- ಗಳ ಮುಂಗಡವನ್ನು ಪಡೆದಿರುವ ಉದ್ಯೋಗಿಗಳು ಅರ್ಹವಿರುವ ಉಳಿದ ಮುಂಗಡವನ್ನು ನಿಯಮಾನುಸಾರ ಪಡೆಯಬಹುದಾಗಿರುತ್ತದೆ. ವಿದ್ಯಾಭ್ಯಾಸ ಮುಂಗಡವು ಗರಿಷ್ಠ ರೂ.50,000/- ಗಳಿಗೆ ಮಿತಿಗೊಳಿಸಲಾಗಿದೆ.

ವಿದ್ಯಾಭ್ಯಾಸದ ಮುಂಗಡವನ್ನು ಪಡೆಯಲಿಚ್ಛಿಸುವ ಉದ್ಯೋಗಿಗಳು ಮಕ್ಕಳ ವಿದ್ಯಾಭ್ಯಾಸದ ದಾಖಲೆಗಳನ್ನು ಅರ್ಜಿಯ ಜೊತೆಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

ಮದುವೆಯಾಗಿರುವ ಅಥವಾ ಉದ್ಯೋಗದಲ್ಲಿರುವ ಮಕ್ಕಳಿಗೆ ಸಂಸ್ಥೆಯಿಂದ ಉದ್ಯೋಗಿಗಳು ಈ ಮುಂಗಡ ಪಡೆಯಲು ಅರ್ಹರಿರುವುದಿಲ್ಲ.

ಸಂಸ್ಥೆಯಲ್ಲಿ ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿರುವ ವಿಶೇಷ ತಹಶೀಲ್ದಾರ್ ಹಾಗೂ ರಾಜಸ್ವ ನಿರೀಕ್ಷಕರು ಸಂಸ್ಥೆಯಿಂದ ಮಕ್ಕಳ ವಿದ್ಯಾಭ್ಯಾಸ ಮುಂಗಡವನ್ನು ಪಡೆಯಲು ಅರ್ಹರಿರುವುದಿಲ್ಲ.

ಪ್ರಸ್ತುತ ಜಾರಿಯಲ್ಲಿರುವ ವಿದ್ಯಾಭ್ಯಾಸ ಮುಂಗಡದ ಸುತ್ತೋಲೆಯ ಷರತ್ತುಗಳಲ್ಲಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ.

N. Venkatesh (signature)
ಉಪ ಪ್ರಧಾನ ವ್ಯವಸ್ಥಾಪಕರು (ಸಿ&ಆ)

ಗೆ,

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ,
ಎಲ್ಲಾ ಶಾಖಾ ಕಛೇರಿಗಳಿಗೆ, ಆಲೆಪ ಕೋಶ, ಬೆಂಗಳೂರು, ಮೈಸೂರು, ಧಾರವಾಡ ಮತ್ತು ಕಲಬುರಗಿ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ,
ಕಾರ್ಯ ನಿರ್ವಾಹಕ ನಿರ್ದೇಶಕರುಗಳಿಗೆ
ವ್ಯನಿ. ರವರ ಆಪ್ತ ಕಾರ್ಯದರ್ಶಿಯವರಿಗೆ -ಮಾಹಿತಿಗಾಗಿ.

ಅಧ್ಯಕ್ಷರು, ಕರಾಹಸಂ ನೌಕರರ / ಅಧಿಕಾರಿಗಳ / ಪ.ಜಾ & ಪ.ಪಂ ನೌಕರರ ಸಂಘ, ಪ್ರಧಾನ ಕಛೇರಿ,
ಗ್ರಂಥಾಲಯ / ಸೂಚನಾ ಫಲಕಕ್ಕೆ, ಕಛೇರಿ ಪ್ರತಿ.




Scanned by CamScanner

# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ

# KARNATAKA STATE FINANCIAL CORPORATION

Established under the State Financial Corporations' Act, 1951

ON HOLD

ಸಂಖ್ಯೆ: ಕ.ರಾ.ಹ.ಸಂ./ಪ್ರ.ಕ./ ಸಿಬ್ಬಂದಿ|334|2019-20
Ref. No. KSFC/H.O./

ದಿನಾಂಕ:
Date 12/6/19

## ಸಿಬ್ಬಂದಿ ಪ್ರಕಟಣೆ ಸಂಖ್ಯೆ - 09

ಸಂಸ್ಥೆಯ ನಿರ್ದೇಶಕ ಮಂಡಳಿಯು ಸಂಸ್ಥೆಯ ಉದ್ಯೋಗಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಹಬ್ಬದ ಮುಂಗಡದ ಮೊತ್ತವನ್ನು ಸರ್ಕಾರಿ ಆದೇಶ ಸಂಖ್ಯೆ:ಆಇ 19 ಮಕುಮು 2018 ಬೆಂಗಳೂರು ದಿ:11.01.2019 ರ ಪ್ರಕಾರ ಪರಿಷ್ಕರಿಸಿ ಹಬ್ಬದ ಮುಂಗಡ ಹಣವನ್ನು ದಿನಾಂಕ 20.05.2019 ರಂದು ನಡೆದ ಸಭೆಯಲ್ಲಿ ರೂ.5,000/- ಗಳಿಂದ ರೂ.10,000/- ಗಳಿಗೆ ಹೆಚ್ಚಿಸಲು ಅನುಮೋದಿಸಿರುತ್ತದೆ ಎಂಬ ಅಂಶವನ್ನು ತಿಳಿಸಲು ಹರ್ಷಿಸುತ್ತೇವೆ. ಈ ಪರಿಷ್ಕೃತ ಮುಂಗಡ ಸೌಲಭ್ಯವು ದಿನಾಂಕ 01.04.2019ರಿಂದ ಅನ್ವಯವಾಗುತ್ತದೆ. ಈ ಪರಿಷ್ಕೃತ ಮುಂಗಡ ಹಣವನ್ನು ವಾರ್ಷಿಕ ವರ್ಷದಲ್ಲಿ ಒಂದು ಬಾರಿ ಮಾತ್ರ ನಿಗದಿತ ಅರ್ಜಿಯನ್ನು ಸಲ್ಲಿಸಿ ಪಡೆಯಬಹುದು.

ಈಗಾಗಲೇ ರೂ.5,000/- ಗಳ ಮುಂಗಡವನ್ನು ಪಡೆದಿರುವ ಉದ್ಯೋಗಿಗಳು ಅರ್ಹವಿರುವ ಉಳಿದ ಮುಂಗಡವನ್ನು ನಿಯಮಾನುಸಾರ ಪಡೆಯಬಹುದಾಗಿರುತ್ತದೆ.

ಸಂಸ್ಥೆಯಲ್ಲಿ ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿರುವ ವಿಶೇಷ ತಹಶೀಲ್ದಾರ್ ಹಾಗೂ ರಾಜಸ್ವ ನಿರೀಕ್ಷಕರು ಸಂಸ್ಥೆಯಿಂದ ಹಬ್ಬದ ಮುಂಗಡವನ್ನು ಪಡೆಯಲು ಅರ್ಹರಿರುವುದಿಲ್ಲ.

ಪ್ರಸ್ತುತ ಜಾರಿಯಲ್ಲಿರುವ ಹಬ್ಬದ ಮುಂಗಡದ ಸುತ್ತೋಲೆಯ ಷರತ್ತುಗಳಲ್ಲಿ ಬೇರೆ ಯಾವುದೇ ಬದಲಾವಣೆ ಇರುವುದಿಲ್ಲ.

ಉಪ ಪ್ರಧಾನ ವ್ಯವಸ್ಥಾಪಕರು (ಸಿ&ಆ)

ಗೆ,

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ,
ಎಲ್ಲಾ ಶಾಖಾ ಕಛೇರಿಗಳಿಗೆ,
ಆಲೆಪ ಕೋಶ, ಬೆಂಗಳೂರು, ಮೈಸೂರು, ಧಾರವಾಡ ಮತ್ತು ಕಲಬುರಗಿ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ,
ಕಾರ್ಯ ನಿರ್ವಾಹಕ ನಿರ್ದೇಶಕರುಗಳಿಗೆ
ವ್ಯ.ನಿ. ರವರ ಆಪ್ತ ಕಾರ್ಯದರ್ಶಿಯವರಿಗೆ –ಮಾಹಿತಿಗಾಗಿ.

ಅಧ್ಯಕ್ಷರು, ಕರಾಹಸಂ ನೌಕರರ / ಅಧಿಕಾರಿಗಳ / ಪ.ಜಾ & ಪ.ಪಂ ನೌಕರರ ಸಂಘ,
ಪ್ರಧಾನ ಕಛೇರಿ, ಗ್ರಂಥಾಲಯ / ಸೂಚನಾ ಫಲಕಕ್ಕೆ, ಕಛೇರಿ ಪ್ರತಿ.

ಪ್ರಧಾನ ಕಛೇರಿ: ಕೆ.ಎಸ್.ಎಫ್.ಸಿ ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052
ದೂರವಾಣಿ ಸಂಖ್ಯೆ ಸಾಮಾನ್ಯ: 22263322 ಫ್ಯಾಕ್ಸ್: 080-22250126 ಇ-ಮೇಲ್: info@ksfc.in ವೆಬ್: www.ksfc.in
HEAD OFFICE: KSFC Bhavan, No. 1/1, Thimmaiah Road, Near Cantonment Railway Station, Bengaluru - 560 052

Scanned by CamScanner